## ಔಷಧೀಯ ಗುಣಗಳ ಕಲ್ಲು ಬಾಳೆ



ಬಾಲ್ಯದಲ್ಲಿ ನಮ್ಮೂರ ಕಾಡುದಾರಿಯಲ್ಲಿ ನಡೆಯುವಾಗ, ಪಾದೆಕಲ್ಲುಗಳ ನಡುವಿನ ಬಿರುಕುಗಳಲ್ಲಿ ಬೆಳೆದು ನಿಂತ ದಪ್ಪ ಬಾಳೆಯ ಸಸಿಗಳಲ್ಲಿ ಹಳದಿ ಕದಳಿ ಹಣ್ಣುಗಳು ಮನಸೂರೆಗೊಳ್ಳುತ್ತಿದ್ದವು. ಆಸೆ ಕಂಗಳಿಂದ ಅವುಗಳನ್ನು ಕಿತ್ತುಕೊಡುವಂತೆ ಅಪ್ಪನನ್ನು ಕೇಳಿಕೊಳ್ಳುತ್ತಿದ್ದೆ. ಆಗವರು, 'ಅದು ಕಲ್ಲು ಬಾಳೆ ಕಣೋ, ನೋಡಲು ಸಾಮಾನ್ಯ ಬಾಳೆಯಂತೆ ಕಂಡರೂ ಸೇವಿಸಲು ಯೋಗ್ಯವಿಲ್ಲ. ಹಣ್ಣಿನೊಳಗೆ ಕಪ್ಪು ಕಲ್ಲಿನಂತಹ ಬೀಜಗಳಿದ್ದು, ಹಣ್ಣು ಕಹಿಯಾಗಿರುತ್ತದೆ' ಎಂದರುಹಿದಾಗ ಅತೀವ ನಿರಾಸೆಯಾಗಿತ್ತು. ಈಚೆಗೆ ಮಂಗಳೂರಿನ ಪಿಲಿಕುಳ ನಿಸರ್ಗಧಾಮದಲ್ಲಿ ಈ ಕಲ್ಲು ಬಾಳೆ ಗಿಡಗಳನ್ನು ವೀಕ್ಷಿಸಿದೆ.

ಕಾಡುಬಾಳೆ ಎಂದೂ ಕರೆಯುವ ಇದು, ಗರಿಷ್ಠ 12 ಅಡಿ ಎತ್ತರಕ್ಕೆ ಬೆಳೆಯಬಲ್ಲವು. ಕಾಂಡವು ಒರಟಾಗಿದ್ದು 12 ಅಡಿ ವ್ಯಾಸ ಹೊಂದಿರುತ್ತದೆ. ಎಲೆಗಳು ಹತ್ತಡಿಗಿಂತಲೂ ಹೆಚ್ಚು ಉದ್ದ ಬೆಳೆಯುತ್ತವೆ. ಹೂವುಗಳೂ ಸಾಮಾನ್ಯ ಬಾಳೆಗಿಂತ ದೊಡ್ಡ ಗಾತ್ರದಲ್ಲಿದ್ದು ಹಣ್ಣುಗಳೊಳಗೆ ಕಪ್ಪು ಬಣ್ಣದ ಬೀಜಗಳಿರುತ್ತವೆ. ಕೆಲವು ಪ್ರಭೇದಗಳಲ್ಲಿ ಗೊನೆಯ ಕೊನೆಯಲ್ಲಿ ಹೂವುಗಳ ಹಲವು ಗುಚ್ಛಗಳು ಕಾಣಸಿಗುತ್ತವೆ. ಹಣ್ಣುಗಳು ಸಿಹಿ ಕಹಿಯಾಗಿದ್ದು, ಔಷಧೀಯ ಗುಣಗಳಿರುವ ಎನ್ಸಟೆ ಜಾತಿಗೆ ಸೇರಿದೆ. ಇದರಲ್ಲಿ 7 ಉಪಜಾತಿಗಳಿವೆ. ಏಷ್ಯಾ ಮತ್ತು ಆಫ್ರಿಕಾದ ಉಷ್ಣವಲಯ ಪ್ರದೇಶಗಳಲ್ಲಿ ಹಾಸಿದಂತಿರುವ ಕಲ್ಲುಗಳ ನಡುವೆ ಇವು ಬೆಳೆಯುತ್ತವೆ. ಅಪರೂಪದ ಈ ಬಾಳೆಗಳಿಗೆ ಔಷಧೀಯ ಗುಣಗಳಿಂದಾಗಿ ವಿಶೇಷ ಬೇಡಿಕೆಯಿದೆ.

–ರಮಣ್ ಶೆಟ್ಟಿ ರೆಂಜಾಳ್, ಮುಂಬೈ





## ಬೀಜ ಬುತ್ತಿ, ಬೀಗರ ಬುತ್ತಿ

ಉತ್ತರ ಕರ್ನಾಟಕದ ಕಡೆ 'ಬೀಜ ಬುತ್ತಿ' ಅನ್ನುವ ಪದ ಬಳಕೆ ನಿಶ್ಚಿತಾರ್ಥ ಸಮಯದಲ್ಲಿ ಹೆಚ್ಚಾಗಿ ಕೇಳಿಬರುತ್ತದೆ. 'ಬೀಜ ಬುತ್ತಿ'ಯನ್ನು ಹೆಣ್ಣಿನ ಕಡೆಯವರು ಗಂಡಿನ ಕಡೆಯವರಿಗೆ ನಿಶ್ಚಿತಾರ್ಥ ಕಾರ್ಯಕ್ರಮದ ಮುಂಚೆ ವಿಶೇಷವಾಗಿ ಕೊಡುವ ಉಡುಗೊರೆ ಎನ್ನಬಹುದು. ಇದಕ್ಕೆ ಪುರಾತನ ಕಾಲದ ಇತಿಹಾಸವಿದೆ. ಮೊಸರು, ಬೆಳ್ಳುಳ್ಳಿಯಿಂದ ಕೂಡಿರುವ ಅನ್ನ ಮಾಡಿರುತ್ತಾರೆ. ಇದಕ್ಕೆ ಅನ್ನದ ಬಾಣ ಎಂದು ಹೆಸರು. ಜೊತೆಗೆ ಸಜ್ಜೆ ರೊಟ್ಟಿ, ಜೋಳದ ರೊಟ್ಟಿ, ಎಣಗಾಯಿ ಬದನೆಕಾಯಿ, ಪಲ್ಲೆ, ಹಿಟ್ಟಿನ ಪಲ್ಯದ ಚೌಕಾಕಾರದ ವಡೆ, ಅಗಸಿಚಟ್ನಿ, ಶೇಂಗಾಚಟ್ನಿ, ಗುರೆಳ್ಳು ಚಟ್ನಿ ತಯಾರಿಸಿಕೊಂಡು ಬಿದಿರು ಬುಟ್ಟಿಯಲ್ಲಿ ಒಪ್ಪವಾಗಿ ಜೋಡಿಸಿಡಲಾಗುತ್ತದೆ. ಅದಕ್ಕೆ ಬಿಳಿ ಬುತ್ತಿ ಅರಿವೆಯನ್ನು ಕಟ್ಟಿಕೊಂಡು ಚಕ್ಕಡಿಯಲ್ಲಿ ಒರಲಾಗುತ್ತದೆ. ಸಾಂಪ್ರದಾಯವಾಗಿ ನಡೆದುಕೊಂಡು ಬಂದಿರುವ ಈ ಪದ್ಧತಿಯು ಈಚೆಗೆ ಕಂಡು ಬಂದದ್ದು ಶಿವಮೊಗ್ಗ ಜಿಲ್ಲೆಯ ಹಾನಗಲ್ಲ ತಾಲ್ಲೂಕಿನ ಸಾಬಾರ ಗ್ರಾಮದಲ್ಲಿ. ಗ್ರಾಮದ ಹಿರಿಯರಾದ ಶೇಖರಪ್ಪ ಶ್ಯಾಡಗುಪ್ಪಿ ಅವರ ಮೊಮ್ಮಗನ ಬೀಗರು ತಂದ ಬೀಜ ಬುತ್ತಿಯ ಚಿತ್ರ ಇದಾಗಿದೆ.

–ಮಹಾಂತೇಶ ಬಾಗೇವಾಡಿ, ಬಾದಾಮಿ

## ಅಸಲಿ-ನಕಲಿ

ಕೆಲವೊಂದು ಸಂದರ್ಭಗಳಲ್ಲಿ ನಮ್ಮ ಕಣ್ಣುಗಳು ನಮಗೇ ಮೋಸ ಮಾಡುತ್ತವೇನೋ ಎಂಬ ಅನುಮಾನ ಮೂಡುತ್ತದೆ. ಗದಗ ಜಿಲ್ಲೆ ಲಕ್ಕುಂಡಿಯಲ್ಲಿರುವ ಐತಿಹಾಸಿಕ ಸ್ಮಾರಕಗಳನ್ನು ನೋಡಲು ಹೋಗಿದ್ದೆವು. ಕೋಟೆ ಶ್ರೀ ವೀರಭದ್ರೇಶ್ವರ ದೇವಾಲಯದ ಮುಖ್ಯ ಗೋಪುರದ ಕಡೆ ಸಾಗುತ್ತಿರುವಾಗ, ಗೋಪುರದ ಎದುರು ಭಾಗದಲ್ಲಿ ಕಟ್ಟಿಹಾಕಲಾಗಿದ್ದ ನಾಲ್ಕು ಎತ್ತುಗಳು ನನ್ನ ಗಮನಸೆಳೆದವು. ಬೇವಿನ ಮರದ ನೆರಳಿನಲ್ಲಿ ಕಟ್ಟಿಹಾಕಲಾಗಿದ್ದ ಶುಭ್ರ ಶ್ವೇತ ವರ್ಣದ ಎರಡು ಎತ್ತುಗಳು ನನ್ನತ್ತಲೇ ನೋಡುತ್ತಿದ್ದವು. ಆ ಎತ್ತುಗಳ ಕಡೆ ಮುಖಮಾಡಿ ನಿಲ್ಲುವಂತೆ ಬಿಸಿಲಿನಲ್ಲಿ ಕಟ್ಟಿಹಾಕಲಾಗಿದ್ದ ಒಂದು ಶ್ವೇತ ವರ್ಣದ ಮತ್ತೊಂದು ಬಿಳಿ ಮತ್ತು ಕಂದು ಮಿಶ್ರ ಬಣ್ಣದ ಎತ್ತುಗಳು ಮೆಲುಕು ಹಾಕುತ್ತಿದ್ದವು.

ಬೇವಿನ ಮರದ ನೆರಳಿನಲ್ಲಿದ್ದ ಎತ್ತುಗಳು ಸ್ವಲ್ಪವೂ ಅಲುಗಾಡದೆ ದೃಷ್ಟಿಯನ್ನು ನನ್ನ ಮೇಲೆ ನೆಟ್ಟಿದ್ದವು. ಅನುಮಾನ ಬಂದು ಹತ್ತಿರ ಹೋಗಿ ನೋಡಲಾಗಿ ಅವೆರಡೂ ಮಣ್ಣಿನಿಂದ ಮಾಡಿ ಬಣ್ಣ ಬಳಿಯಲಾದ ಸಹಜ ಗಾತ್ರದ ಎತ್ತುಗಳೆಂದು ತಿಳಿಯಿತು. ಬೇವಿನ ಮರದ ಕೆಳಗೆ ನಿಂತಿರುವಂತೆ ಎತ್ತುಗಳ ಪ್ರತಿಕೃತಿಯನ್ನು ಮಣ್ಣಿನಿಂದ ರಚಿಸಿ ನಿಲ್ಲಿಸುವುದರ ಹಿಂದಿನ ಉದ್ದೇಶ ಏನೆಂದು ತಿಳಿಯಲಿಲ್ಲ.

–ಜಿ. ಪದ್ಮಾ, ಸಂಡೂರು

